



ಕೃಷಿಯ ಬಗ್ಗೆ ಅವರು ತಳೆದಿದ್ದ ನಿಲುವು ಮಹಾತ್ಮರ ಗ್ರಾಮಸ್ವರಾಜ್ಯದ ಚಿಂತನೆಗೆ ಸವಾಲಾಗಿ ನಿಲ್ಲುತ್ತದೆ. ಗ್ರಾಮ ಮತ್ತದರ ಪರಿಕಲ್ಪನೆಯನ್ನು ಮಹಾತ್ಮಾ ಗಾಂಧಿ ಸುಖ ಸಮೃದ್ಧಿ, ಸಾಮರಸ್ಯದ ಆಶಾವಾದದಿಂದ ನೋಡಿದರೆ, ಅಂಬೇಡ್ಕರ್ ಅದಕ್ಕಿಂತ ಭಿನ್ನವಾಗಿ ಜಾತಿ ಪದ್ಧತಿ – ಅಸಮಾನತೆ – ಅಸ್ಪೃಶ್ಯತೆಗಳ ವಿಕಾರ ರೂಪವಾಗಿ ನೋಡಿದ್ದರು. ಅರ್ಥಶಾಸ್ತ್ರದ ಮಟ್ಟಿಗೆ ಅಂಬೇಡ್ಕರ್ ಭಾವನೆಗಳನ್ನು ಹಿಂದಿಟ್ಟು ಲೌಕಿಕದ ದೃಷ್ಟಿಯಿಂದ ಆಧುನಿಕತೆಯನ್ನು ಅಪ್ಪಿ ನೋಡುತ್ತಿದ್ದರು. ಉದಾಹರಣೆಗೆ, ಭಾರತದ ಕೃಷಿಯ ಸಮಸ್ಯೆಗಳ ಬಗ್ಗೆ ಅವರ ವಿಚಾರಗಳು ವಿಶಿಷ್ಟ ಒಳನೋಟಗಳಿಂದ ಕೂಡಿವೆ. ಕೃಷಿ ಸಮಸ್ಯೆ ಸಣ್ಣ ಹಿಡುವಳಿಗಳೆನ್ನುವ ವಾದವನ್ನು ಅಂಬೇಡ್ಕರ್ ತಳ್ಳಿಹಾಕುತ್ತಾರೆ. ಕೃಷಿ ಭೂಮಿಯನ್ನು ಕ್ರೋಡೀಕರಿಸಿ ವ್ಯವಸಾಯ ಮಾಡುವುದರಿಂದ ದಕ್ಷತೆ ಬರುತ್ತದೆನ್ನುವ ವಾದವನ್ನು ಅಂಬೇಡ್ಕರ್ ಪ್ರಶ್ನಿಸುತ್ತಾರೆ. ಕೃಷಿ ಸಫಲವಾಗಲು ಭೂಮಿಯ ಜೊತೆಗೆ ಹೂಡಿಕೆ, ಕಾಯಕ, ಪರಿಕರಗಳೂ ಬೇಕು – ಅದನ್ನು ಗಮನಿಸದೇ ಬರೇ ಭೂಮಿಯ ಕ್ರೋಡೀಕರಣದಿಂದ ಕೃಷಿ ಸಮಸ್ಯೆಗಳು ಪರಿಷ್ಕಾರವಾಗುವುದಿಲ್ಲ ಎಂದು 1918ರ ಪ್ರಬಂಧದಲ್ಲಿ ವಾದಿಸುತ್ತಾರೆ. ಅವರು ಕೃಷಿಯ ಸಮಸ್ಯೆಯನ್ನು ವಿಶ್ಲೇಷಿಸುವುದು ಭಿನ್ನ ಮಾರ್ಗದಲ್ಲಿ. ದೇಶದ ಮೂರನೇ ಎರಡು ಭಾಗದ ಜನಸಂಖ್ಯೆ ಕೃಷಿಯನ್ನು ಕಾಯಕವಾಗಿ ಮಾಡಿಕೊಂಡಿದ್ದಾರೆ. ಆದರೆ, ನಮ್ಮ ಕೃಷಿಗೆ ಬೇಕಾದದ್ದು ಕೇವಲ ಮೂರನೇ ಒಂದು ಭಾಗದಷ್ಟು ಜನರ ಕಾಯಕ ಮಾತ್ರ. ಹೀಗಾಗಿ ಕೃಷಿಯ ಸಮಸ್ಯೆ ಇರುವುದು ಅವಶ್ಯಕತೆಗಿಂತ ಹೆಚ್ಚು ಜನ ಅದರಲ್ಲಿ ತೊಡಗಿರುವುದೇ ಹೊರತು, ಒಂದು ಹಿಡುವಳಿಯ ಭೂಕ್ಷೇತ್ರದ ವಿಸ್ತೀರ್ಣವಲ್ಲ ಎನ್ನುತ್ತಾರೆ. ಇಂದಿಗೂ ಇದು ಸಲ್ಲುವ ವಾದವೇ. ಅಂಬೇಡ್ಕರ್ ರಾಜಕೀಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳದಿದ್ದರೆ ಒಬ್ಬ ಪ್ರಖರ ಅರ್ಥಶಾಸ್ತ್ರಜ್ಞರಾಗಿ ಸ್ಥಾಪಿತರಾಗುತ್ತಿದ್ದರೆಂದು ಗೋಪಾಲ್ ಹೇಳುತ್ತಾರೆ.

ಅರ್ಥಶಾಸ್ತ್ರಜ್ಞರಾಗಿ ಅಂಬೇಡ್ಕರ್ ಬರೆದ ಮಹಾಪ್ರಬಂಧದಲ್ಲಿ ಬ್ರಿಟಿಷರ ತೆರಿಗೆ ಮತ್ತು ಅರ್ಥನೀತಿಯನ್ನು ತೀವ್ರವಾಗಿ ಟೀಕಿಸಿದ್ದಾರೆ. ಭಾರತದ ಬೊಕ್ಕಸ ದಿವಾಳಿತನದತ್ತ ಪಯಣಿಸುವುದಕ್ಕೆ ಬ್ರಿಟಿಷರ ತೆರಿಗೆ ನೀತಿ, ಭೂ ತೆರಿಗೆ ಮತ್ತು ಆಯಾತಕ್ಕೆ ಹೇರುತ್ತಿದ್ದ ತೆರಿಗೆ ಔದ್ಯೋಗಿಕ ಪ್ರಗತಿಯನ್ನು ಕುಂಠಿತಗೊಳಿಸಿತೆಂದು ವಾದಿಸುತ್ತಾರೆ. ಅಂಬೇಡ್ಕರ್ ವಾದ ಎಷ್ಟು ಕಟುವಾಗಿತ್ತೆಂದರೆ, 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್'ನಲ್ಲಿ ಅವರ ಮಹಾಪ್ರಬಂಧದ ಮೊನಚನ್ನು ತುಸು ಕಡಿಮೆ ಮಾಡಬೇಕೆಂಬ ಸೂಚನೆ ಬಂದಿತ್ತು. ಅದೇ ರೀತಿ ಭಾರತದ ರೂಪಾಯಿಗೆ ಕಟ್ಟದ ಮೌಲ್ಯದಿಂದಾಗಿ ಆದ ತೊಂದರೆಯನ್ನೂ ಅವರು ದಾಖಲಿಸಿದ್ದರು. ಅಂಬೇಡ್ಕರ್ ಅವರ ಶಿಫಾರಸ್ಸಿನ ಮೇರೆಗೆ ಭಾರತೀಯ ರಿಜರ್ವ್ ಬ್ಯಾಂಕಿನ ಸ್ಥಾಪನೆಯೂ ಆಯಿತು. ಈ ಆಯಾಮಗಳನ್ನು ಅಶೋಕ್ ಗೋಪಾಲ್ ತಮ್ಮ ಪುಸ್ತಕದಲ್ಲಿ ಯಶಸ್ವಿಯಾಗಿ ದಾಖಲಿಸುತ್ತಾರೆ.

ಅಶೋಕ್ ಗೋಪಾಲರ ಪುಸ್ತಕಕ್ಕೆ ಪೂರಕವಾಗಿ ಅಂಬೇಡ್ಕರ್ ಜೀವನದ ಆದಿ ಭಾಗವನ್ನು ಆಕಾಶ್ ಸಿಂಗ್ ರಾಥೋರ್ 'ಬಿಕಮಿಂಗ್ ಬಾಬಾಸಾಹೇಬ್' ಎನ್ನುವ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅಶೋಕ್ ಗೋಪಾಲರ ಪುಸ್ತಕದಲ್ಲಿರುವ ವಿವರಗಳೇ ರಾಥೋರ್ ಪುಸ್ತಕದಲ್ಲಿದ್ದರೂ, ರಾಥೋರ್ ತಾರೀಖು ಮತ್ತು ಘಟನೆಗಳನ್ನು ಪುನರವಲೋಕನ ಮಾಡಿ, ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ, ಕಾಲಘಟ್ಟದ ನಿಖರತೆಯನ್ನು ಸ್ಥಾಪಿಸುತ್ತಾರೆ. ಅದರಲ್ಲೂ ಅಂಬೇಡ್ಕರ್ ಜೀವನಗಾಥೆಯಲ್ಲಿ ಬರುವ ಲಂಡನ್ನಿನ ಮಹಿಳೆ 'ಎಫ್' ಬಗ್ಗೆ ಮತ್ತು ಆಕೆ-ಅಂಬೇಡ್ಕರ್ ಇದ್ದಿರಬಹುದಾದ ಮನೆಯ ವಿಳಾಸವನ್ನು ಪರಿಗಣಿಸಿ, ಅವರ ನಡುವೆ ಯಾವ ರೀತಿಯ ವ್ಯವಹಾರವಿದ್ದಿರಬಹುದು ಎನ್ನುವುದನ್ನು ಸ್ಥಾಪಿಸಲು ಯತ್ನಿಸುತ್ತಾರೆ.

ಇವೆರಡರ ಜೊತೆಜೊತೆಗೇ ಬಂದಿರುವ ಶಶಿ ತರೂರ್ ಪುಸ್ತಕ ಈ ಎಲ್ಲವನ್ನೂ ಸರಳವಾಗಿ ಒಂದು ಕಥನದ